# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 30

ಸ್ವಾಮಿ ನಿತ್ಯಸ್ಥಾನಂದ

### ಭಗವತಿಯ ಸೌಮ್ಯ-ರೌದ್ರ ರೂಪ

ಶ್ರೀರಾಮಕೃಷ್ಣರು: “ಶ್ಯಾಮಾ ಕಾಳಿಯದು ಸ್ವಲ್ಪ ಮಟ್ಟಿಗೆ ಕೋಮಲ ಸ್ವಭಾವ. ಆಕೆ ವರಾಭಯದಾಯಿನಿ. ಗೃಹಸ್ಥರು ಆಕೆಯನ್ನು ಪೂಜಿಸುತ್ತಾರೆ. ಮಹಾಮಾರಿಕೋಪದ್ರವ, ದುರ್ಭಿಕ್ಷ, ಭೂಕಂಪ, ಅನಾವೃಷ್ಟಿ-ಅತಿವೃಷ್ಟಿಗಳಾದಾಗ ರಕ್ಷಾಕಾಳಿಯ ಪೂಜೆ ಮಾಡಬೇಕಾಗುತ್ತದೆ. ಶ್ಮಶಾನಕಾಳಿ ಸಂಹಾರಮೂರ್ತಿ. ಆಕೆ ಶಿವ, ನರಿ, ಡಾಕಿನಿ, ಯೋಗಿನಿ ಇವುಗಳೊಡಗೂಡಿ ಶ್ಮಶಾನದಲ್ಲಿ ವಾಸಿಸುತ್ತಾಳೆ. ಆಕೆಯ ಬಾಯಿಂದ ರಕ್ತದ ಕೋಡಿ ಹರಿಯುತ್ತಿರುತ್ತದೆ. ಕೊರಳಿಗೆ ರುಂಡಮಾಲೆ ಹಾಕಿಕೊಂಡಿರುತ್ತಾಳೆ. ಸೊಂಟಕ್ಕೆ ನರಹಸ್ತಗಳ ಒಡ್ಯಾಣ ಹಾಕಿಕೊಂಡಿರುತ್ತಾಳೆ.”

ಈ ಪ್ರಪಂಚದಲ್ಲಿ ಸೌಮ್ಯ ಮತ್ತು ರೌದ್ರ ಎರಡೂ ಇವೆ, ಇವು ವಾಸ್ತವದ ಎರಡು ಮುಖಗಳು. ಆದರೆ ಇವೆರಡೂ ಸಾಪೇಕ್ಷವಾದವು, ಯಾವುದನ್ನೂ ನಿರಪೇಕ್ಷಿಕವಾಗಿ ಇದು ಸೌಮ್ಯ ಅಥವಾ ರೌದ್ರ ಎಂದು ಪರಿಗಣಿಸಲಾಗುವುದಿಲ್ಲ. ಇದು ವ್ಯಕ್ತಿನಿಷ್ಠವಾದುದು. ಹುಲಿಯು ನಮಗೆ ರೌದ್ರವಾಗಿ ಕಾಣಬಹುದು. ಆದರೆ ಅದರ ಮರಿಗೆ ಅದು ಅತ್ಯಂತ ಸೌಮ್ಯ. ಮನುಷ್ಯನು ಪ್ರಾಣಿಗಳಿಗೆ ಭಯಂಕರವಾಗಿ ಕಾಣಬಹುದು (ಬಹುದೇನು? ಕಾಣುತ್ತಾನೆ). ಎರಡನ್ನೂ ಸ್ವೀಕರಿಸುವ ಮನೋಭಾವ ನಮಗಿರಬೇಕು. ಅದಕ್ಕಾಗಿ ಭಗವಂತನ ರೌದ್ರರೂಪವನ್ನು ಆರಾಧಿಸುವ ಪದ್ಧತಿಯು ನಮ್ಮಲ್ಲಿರುವುದು. ಕೇವಲ ಸೌಮ್ಯವನ್ನೇ ಅರಾಧಿಸುತ್ತಿದ್ದರೆ ವ್ಯಕ್ತಿಯು ಮೃದು ಸ್ವಭಾವದವನಾಗಿ, ಜೀವನದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲಾಗದವನಾಗಬಹುದು. ರಾಣಿ ರಾಸಮಣಿಯು ಮೊದಲು ಶ್ರೀರಾಮನ ಭಕ್ತಳಾಗಿದ್ದಳು. ಓರ್ವ ಸಂನ್ಯಾಸಿಯು ಬಂದು ಆಕೆಗೆ ದುರ್ಗೆಯನ್ನು ಆರಾಧಿಸಲು ಹೇಳಿದನು. ಈ ಸಲಹೆಯನ್ನು ಆಕೆಯು ಹೃತ್ಪೂರ್ವಕವಾಗಿ ಸ್ವೀಕರಿಸಿದ್ದರಿಂದ ಆಕೆಯು ಬ್ರಿಟಿಷರನ್ನೇ ಎದುರಿಸುವ ಎದೆಗಾರಿಕೆಯನ್ನು ಪಡೆದಳು. ಮೃದುತ್ವವು ತಪ್ಪೆಂದು ಇದರ ಅರ್ಥವಲ್ಲ. ಮೃದುತ್ವವೂ ತುಂಬ ಶಕ್ತಿಶಾಲಿಯಾದುದು ಎಂದು ಸೂಚಿಸುವ ಶ್ಲೋಕವೊಂದಿದೆ:

**ಮೃದುನಾ ದಾರುಣಂ ಹಂತಿ ಮೃದುನಾ ಹಂತ್ಯದಾರುಣಮ್ ।**
**ನಾಸೇವ್ಯಂ ಮೃದುನಾ ಕಿಂಚಿತ್ತಸ್ಮಾತ್ತೀಕ್ಷ್ಣತರೋ ಮೃದುಃ ॥**

“ಮೃದುತ್ವದಿಂದ ಕಠಿಣವಾದದನ್ನೂ ಗೆಲ್ಲಬಹುದು, ಮೃದುವಾದುದನ್ನೂ ಗೆಲ್ಲಬಹುದು. ಈ ಜಗತ್ತಿನಲ್ಲಿ ಮೃದುತ್ವದಿಂದ ಸಾಧಿಸಲಾಗದುದು ಯಾವುದೂ ಇಲ್ಲ. ಆದ್ದರಿಂದ ಮೃದುತ್ವವೇ ಅಜೇಯ ಅಸ್ತ್ರ.” ಆದರೆ ಮೃದುತ್ವದೊಡನೆ ಅದಮ್ಯ ಚಾರಿತ್ರ್ಯ ಶಕ್ತಿಯೂ ಇದ್ದರೆ ಅದು ಅಜೇಯವಾಗಬಲ್ಲದು. ಚಾರಿತ್ರ್ಯಬಲವುಳ್ಳ ಅನೇಕರು ತುಂಬ ಕಠಿಣಸ್ವಭಾವದವರಾಗಿರುತ್ತಾರೆ. ಅದರಿಂದ ಅವರು ಎಲ್ಲರ ನಿಷ್ಠುರಕ್ಕೆ ಪಾತ್ರರಾಗುತ್ತಾರೆ. ಆದ್ದರಿಂದಲೇ “ವಜ್ರದಂತೆ ಕಠೋರವೂ ಹೂವಿನಂತೆ ಮೃದುವೂ ಆಗಿರಬೇಕೆ”ಂದು ಹೇಳಿರುವುದು.

### ಮುಂದಿನ ಸೃಷ್ಟಿಯ ಬೀಜ

ಶ್ರೀರಾಮಕೃಷ್ಣರು: “ಈ ಜಗತ್ತು ನಾಶವಾದಾಗ, ಮಹಾಪ್ರಳಯವಾದಾಗ, ಮುಂದಿನ ಸೃಷ್ಟಿಗಾಗಿ ಜಗನ್ಮಾತೆಯು ಬೀಜಗಳನ್ನೆಲ್ಲ ಶೇಖರಿಸಿ ಇಟ್ಟುಕೊಂಡಿರುತ್ತಾಳೆ. ಇದು ಮನೆಯ ಯಜಮಾನಿ ತನಗೆ ಬೇಕಾಗುವ ಎಲ್ಲ ಬಗೆಯ ವಸ್ತುಗಳನ್ನು ಒಂದು ಗುಡಾಣದಲ್ಲಿ ಶೇಖರಿಸಿ ಇಟ್ಟುಕೊಳ್ಳುವುದಿಲ್ಲವೇ, ಹಾಗೆ ... ಯಜಮಾನಿಯರು ಇಂಥದೊಂದು ಗುಡಾಣ ಇಟ್ಟುಕೊಂಡಿರುತ್ತಾರೆ. ಅದರೊಳಗೆ ಸಮುದ್ರದ ನೊರೆ, ನೀಲಿ ಗುಳಿಗೆ, ಸೌತೆಕಾಯಿ, ಕುಂಬಳಕಾಯಿ, ಸೋರೇಕಾಯಿ ಬೀಜಗಳ ಚಿಕ್ಕ ಚಿಕ್ಕ ಪೊಟ್ಟಣಗಳು ಇವನ್ನೆಲ್ಲ ಇಟ್ಟಿರುತ್ತಾರೆ. ಬೇಕಾದಾಗ ಅವನ್ನು ಹೊರಕ್ಕೆ ತೆಗೆಯುತ್ತಾರೆ. ಅದೇ ರೀತಿಯಾಗಿ ಭಗವತಿ ಬ್ರಹ್ಮಮಯಿ, ಈ ಜಗತ್ತು ನಾಶವಾದ ನಂತರ ಎಲ್ಲ ವಿಧದ ಬೀಜಗಳನ್ನೂ ಮುಂದಿನ ಸೃಷ್ಟಿಗಾಗಿ ಶೇಖರಿಸಿ ಇಟ್ಟುಕೊಳ್ಳುತ್ತಾಳೆ. ಸೃಷ್ಟಿ ಮಾಡಿದ ನಂತರ ಆದ್ಯಾಶಕ್ತಿ ಈ ಜಗತ್ತಿನ ಒಳಗೇ ಇರುತ್ತಾಳೆ — ಈ ಜಗತ್ತನ್ನು ಹೆತ್ತು ಅದರೊಳಗೇ ಅಂತರ್ಗತವಾಗಿರುತ್ತಾಳೆ. ವೇದದಲ್ಲಿ ಇದೆ, ‘ಊರ್ಣನಾಭಿ’ಯ (ಜೇಡರ ಹುಳುವಿನ) ಮತ್ತು ಅದರ ಬಲೆಯ ವಿಷಯ. ಜೇಡರ ಹುಳು ತನ್ನ ಹೊಟ್ಟೆಯಿಂದಲೇ ತೆಗೆದ ತಂತುವಿನಿಂದ ಬಲೆ ಕಟ್ಟಿ ಅದರ ಮೇಲೆ ತಾನೂ ನಿಲ್ಲುತ್ತದೆ. ಹಾಗೆಯೇ ಭಗವಂತ ಈ ಆಧಾರ ಮತ್ತು ಆಧೇಯ ಎರಡೂ ಆಗಿದ್ದಾನೆ.”

ಯಜಮಾನಿಯರು ವಿವಿಧ ಬೀಜಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ವಿಚಾರವು ಬೈಬಲ್ಲಿನಲ್ಲಿ ಬರುವ ನೋವಾಸ್ ಆರ್ಕ್ (Noah's Ark) ಕಥೆಯನ್ನು ನೆನಪಿಸಿಕೊಡುತ್ತದೆ. ಭಗವಂತನು ಪ್ರಳಯಕ್ಕೆ ಮುಂಚೆ ನೋವಾನನ್ನು ಕರೆದು ಹೇಳಿದನಂತೆ: “ನಾನೀಗ ಇಡೀ ಜಗತ್ತನ್ನು ಮುಳುಗಿಸುವವನಿದ್ದೇನೆ. ನೀನೊಂದು ಬೃಹತ್ ಗಾತ್ರದ ದೋಣಿಯನ್ನು ನಿರ್ಮಿಸಿ, ಮುಂದಿನ ಸೃಷ್ಟಿಗಾಗಿ, ಎಲ್ಲ ಜೀವಿಗಳ, ಸಸ್ಯಗಳ ಒಂದೊಂದು ಮಾದರಿಯನ್ನು ಸಂಗ್ರಹಿಸು” ಎಂದು. ನಮ್ಮ ಪುರಾಣದಲ್ಲಿ ಬರುವ ಮನುವಿನ

ಕಥೆಯೂ ಇದೇ ರೀತಿಯಿದೆ. ಅದನ್ನು ಸ್ವಾಮಿ ವಿವೇಕಾನಂದರು ಈ ರೀತಿ ವಿವರಿಸುತ್ತಾರೆ: ''ಮನುವೆಂಬ ಪುರಾತನ ಮಹರ್ಷಿಯು ಗಂಗಾನದಿಯ ತೀರದಲ್ಲಿ ಪ್ರಾರ್ಥಿಸುತ್ತಿದ್ದನು. ಸಣ್ಣ ಮೀನೊಂದು ರಕ್ಷಣೆಗಾಗಿ ಅವನ ಹತ್ತಿರ ಬಂದಿತು. ಮನು ತನ್ನ ಹತ್ತಿರವಿದ್ದ ಒಂದು ಮಡಕೆಯಲ್ಲಿ ಅದನ್ನು ಇಟ್ಟು... ಮನೆಗೆ ತೆಗೆದುಕೊಂಡು ಹೋದನು. ಬೆಳಗ್ಗೆ ಅದು ಆ ಮಡಕೆಯಷ್ಟು ದೊಡ್ಡದಾಯಿತು. ಆಗ ಅದನ್ನು ಒಂದು ಕೆರೆಗೆ ಬಿಟ್ಟನು. ಅದು ಆ ಕೆರೆಯಷ್ಟು ದೊಡ್ಡದಾಗಲು ಅದನ್ನು ಒಂದು ನದಿಗೆ ಬಿಟ್ಟನು. ಮಾರನೆಯ ದಿನ ಅದು ನದಿಯಷ್ಟು ದೊಡ್ಡದಾಗಲು ಅದನ್ನು ಸಾಗರಕ್ಕೆ ಹಾಕಿದನು. ಅದು ಮನುವಿಗೆ, 'ನಾನು ಸೃಷ್ಟಿಕರ್ತ. ಈ ಪ್ರಪಂಚಕ್ಕೆ ಪ್ರಳಯವನ್ನು ತರುತ್ತೇನೆ ಎಂದು ನಿನಗೆ ಎಚ್ಚರಿಕೆ ಕೊಡಲು ಈ ಆಕಾರದಿಂದ ಬಂದೆ. ನೀನು ಒಂದು ದೋಣಿಯನ್ನು ಕಟ್ಟಿ ಅದರಲ್ಲಿ ಪ್ರಪಂಚದಲ್ಲಿರುವ ಪ್ರಾಣಿಗಳ ಒಂದೊಂದು ಜೊತೆಯನ್ನು ಇಡು. ನಿನ್ನ ಮನೆಯವರು ಅದನ್ನು ಪ್ರವೇಶಿಸಲಿ. ನೀರಿನಿಂದ ನನ್ನ ಕೊಂಬು ಮೇಲೇಳುವುದು. ದೋಣಿಯನ್ನು ಅದಕ್ಕೆ ಕಟ್ಟು, ಪ್ರಳಯಾನಂತರ ಭೂಮಿಗೆ ಬಂದು ಸಂತತಿಯನ್ನು ಹರಡು' ಎಂದಿತು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೨, ೧೬-೧೭)*

ಶ್ರೀರಾಮಕೃಷ್ಣರು ಇಲ್ಲಿ ಮುಂಡಕೋಪನಿಷತ್ತಿನಲ್ಲಿ ಬರುವ ಊರ್ಣನಾಭಿಯ ಉದಾಹರಣೆಯನ್ನು ಪ್ರಸ್ತಾಪಿಸಿರುತ್ತಾರೆ. ಅಲ್ಲಿ ಬರುವ ಪೂರ್ಣ ಶ್ಲೋಕವು ಹೀಗಿದೆ:

**ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ**
**ಯಥಾ ಪೃಥಿವ್ಯಾಂ ಓಷಧಯಃ ಸಂಭವಂತಿ ।**
**ಯಥಾ ಸತಃ ಪುರುಷಾತ್ ಕೇಶಲೋಮಾನಿ**
**ತಥಾ ಕ್ಷರಾತ್ ಸಂಭವಂತೀಹ ವಿಶ್ವಂ ॥** *(ಮುಂಡಕ, ೧.೧.೭)*

'ಹೇಗೆ ಜೇಡರ ಹುಳು (ತಂತುವನ್ನು) ಸೃಷ್ಟಿಮಾಡಿ ಮತ್ತೆ ಹಿಂದಕ್ಕೆ ತೆಗೆದುಕೊಳ್ಳುವದೋ, ಹೇಗೆ ಪೃಥಿವಿಯಲ್ಲಿ ಗಿಡಮರಗಳು ಉಂಟಾಗುವವೊ, ಹೇಗೆ ಇರುವ ಮನುಷ್ಯನಿಂದ ಕೂದಲುಗಳು ಹುಟ್ಟುವವೊ ಹಾಗೆ ಅಕ್ಷರದಿಂದ ಇಲ್ಲಿ ಎಲ್ಲವೂ ಉಂಟಾಗುತ್ತದೆ.'

ಇಲ್ಲಿ ಸೃಷ್ಟಿಯ ಸಂಬಂಧವಾಗಿ ಕೊಟ್ಟಿರುವ ಮೂರು ಉದಾಹರಣೆಗಳೂ ತುಂಬ ಅರ್ಥಗರ್ಭಿತವಾಗಿವೆ. ಜೇಡರ ಬಲೆಯಲ್ಲಿ ಬಂಧಿಸುವ ಶಕ್ತಿಯಿದೆ - ಅನೇಕ ಹುಳಗಳನ್ನು ಬಂಧಿಸುತ್ತದೆ. ಅನಂತರ ಅವು ಜೇಡಕ್ಕೆ ಆಹಾರವಾಗುತ್ತದೆ. ಹಾಗೆಯೇ ಈ ಜಗತ್ತು ನಮ್ಮನ್ನು ಬಂಧಿಸಿ ಮೃತ್ಯುವಿಗೆ ಬಲಿಕೊಡುತ್ತದೆ. ಪೃಥಿವಿಯಲ್ಲಿ ಬೆಳೆಯುವ ಗಿಡಮರಗಳು ಪೋಷಿಸುವಂತೆ ಈ ಜಗತ್ತೂ ನಮ್ಮನ್ನು ಪೋಷಿಸಿ ಇಲ್ಲಿಯೇ ಇರಿಸಿಕೊಳ್ಳುತ್ತದೆ. ಮನುಷ್ಯನ ದೇಹದಲ್ಲಿ ಬೆಳೆಯುವ ಕೇಶಲೋಮಗಳನ್ನು ಕತ್ತರಿಸಿ ಬಿಸಾಕುತ್ತಾರೆ. ಅದೇ ರೀತಿ ಈ ಜಗತ್ತನ್ನು ನಾವು ತಿರಸ್ಕರಿಸಬೇಕು. ಇನ್ನೊಂದು ವಿಷಯ: ಜೇಡ ಬಲೆ ಕಟ್ಟುವುದರ ಹಿಂದೆ ಒಂದು ಉದ್ದೇಶವಿದೆ, ಆದರೆ ಬ್ರಹ್ಮನಿಗೆ ಯಾವ ಉದ್ದೇಶವೂ ಇಲ್ಲ, ಈ ಜಗತ್ತು ಅವನ ಲೀಲೆ. ಪೃಥ್ವಿಯು ಗಿಡಮರಗಳನ್ನು ಉಂಟುಮಾಡುವುದರ ಹಿಂದೆ ಯಾವ ಉದ್ದೇಶವೂ ಇಲ್ಲ, ಆದರೆ ಅದು ನಿಯಂತ್ರಿತವಾಗಿದೆ (Conditioned). ಬ್ರಹ್ಮನಿಗೆ ಉದ್ದೇಶವೂ ಇಲ್ಲ, ನಿಯಂತ್ರಿತನೂ ಅಲ್ಲ. ಮನುಷ್ಯನ ದೇಹದಿಂದ ಕೇಶಲೋಮಗಳು ಸ್ವಾಭಾವಿಕವಾಗಿಯೇ ಬೆಳೆಯುತ್ತವೆ. ಆದರೆ ಅದರ ಹಿಂದೆ ಚೈತನ್ಯ ಶಕ್ತಿ ಕೆಲಸಮಾಡುತ್ತಿದೆ. ಹಾಗೆಯೇ ಸೃಷ್ಟಿಯ ಹಿಂದೆ ಚೈತನ್ಯ ಶಕ್ತಿ ಕೆಲಸ ಮಾಡುತ್ತಿದೆ. ಈ ಮೇಲಿನ ಉದಾಹರಣೆಗಳಿಂದ ತಿಳಿದು ಬರುವುದೇನೆಂದರೆ: ಭಗವಂತನ ಸೃಷ್ಟಿಕಾರ್ಯದ ಹಿಂದೆ ಯಾವ ಉದ್ದೇಶವೂ ಇಲ್ಲ, (ಅವನಿಗೆ ಯಾವ ಉದ್ದೇಶವೂ ಇರಲಾರದು), ಮತ್ತು ಅವನು ಅನಿಯಂತ್ರಿತನೂ ಅಲ್ಲ, ಹಾಗೂ ಈ ಸೃಷ್ಟಿಕಾರ್ಯದ ಹಿಂದೆ ಚೈತನ್ಯ ಶಕ್ತಿಯಂತೂ ಇರಲೇಬೇಕು, ಇದೊಂದು ಯಾಂತ್ರಿಕ ಕ್ರಿಯೆಯಲ್ಲ.

## ವಿದ್ಯಾ-ಅವಿದ್ಯಾ ಮಾಯೆ

**ಶ್ರೀರಾಮಕೃಷ್ಣರು:** ''ಬಂಧನ ಮುಕ್ತಿ ಇವೆರಡರ ಕರ್ತಳೂ ಅವಳೇ. ಆಕೆಯ ಮಾಯೆಯ ದೆಸೆಯಿಂದ ಸಾಂಸಾರಿಕ ಜೀವರು ಕಾಮ ಕಾಂಚನಗಳಿಂದ ಬದ್ಧರಾಗುತ್ತಾರೆ. ಮತ್ತೆ ಆಕೆಯ ಕೃಪೆಯಿಂದಲೇ ಮುಕ್ತರಾಗುತ್ತಾರೆ. ಆಕೆ ನಮ್ಮ ಭವಬಂಧನವನ್ನು ಹರಿದು ಕಾಪಾಡತಕ್ಕವಳು. ಭಗವತಿ ಲೀಲಾಮಯಿ. ಈ ಜಗತ್ತು ಆಕೆಯ ಕ್ರೀಡೆ. ಆಕೆ ಇಚ್ಛಾಮಯಿ. ಲಕ್ಷ ಜನರಲ್ಲಿ ಎಲ್ಲೋ ಒಬ್ಬರಿಗೆ ಮಾತ್ರ ಮುಕ್ತಿ ಕೊಡುತ್ತಾಳೆ.''

ಮಾಯೆಯಿಂದ ಪಾರಾಗಬೇಕಾದರೆ ಮಾಯೆಯನ್ನೇ ಆಶ್ರಯಿಸಬೇಕು. ವಿದ್ಯಾ ಮಾಯೆಯ ಸಹಾಯದಿಂದ — ಜ್ಞಾನ, ಭಕ್ತಿ, ವಿವೇಕ, ವೈರಾಗ್ಯಗಳಿಂದ — ಅವಿದ್ಯಾ ಮಾಯೆಯಿಂದ ಪಾರಾಗಿ, ವಿದ್ಯಾಮಾಯೆಯನ್ನೂ ಮೀರಿಹೋಗಬೇಕು. ಅಲ್ಲಮಪ್ರಭುಗಳ ಒಂದು ವಚನ ಇಂತಿದೆ:

**ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ,**
**ಸಕಲ ವೇದಶಾಸ್ತ್ರವೆಂಬ ನೇಣ ಕಟ್ಟಿ, ಹಿಡಿದು ತೂಗಿ**
**ಜೋಗುಳವಾಡುತ್ತಿದ್ದಾಳೆ, ಭ್ರಾಂತಿಯೆಂಬ ತಾಯಿ**
**ತೊಟ್ಟಿಲು ಮುರಿದು ನೇಣು ಹರಿದು ಜೋಗುಳ ನಿಂದಲ್ಲದೆ**
**ಗುಹೇಶ್ವರನೆಂಬ ಲಿಂಗವ ಕಾಣಬಾರದು.**

ಈ ಸುಂದರವಾದ ವಚನ ಶ್ರೀರಾಮಕೃಷ್ಣರ ಭಾವವನ್ನು ಸೊಗಸಾಗಿ ವ್ಯಕ್ತಪಡಿಸುತ್ತದೆ. ನೇಣು ಬಂಧನಕ್ಕೂ ಕಾರಣ, ಮೇಲೇರುವುದಕ್ಕೂ ಸಾಧನ. ನಾವು ವೇದಶಾಸ್ತ್ರವನ್ನು ಪ್ರಜ್ಞಾಪೂರ್ವಕವಾಗಿ ಉಪಯೋಗಿಸಿದರೆ ಅದು ಆಧ್ಯಾತ್ಮಿಕವಾಗಿ ಮೇಲೇರುವ ಸಾಧನವಾಗುತ್ತದೆ. ಅದನ್ನೇ ವೈಯಕ್ತಿಕ ವೈಭವೀಕರಣಕ್ಕೆ ಉಪಯೋಗಿಸಿದರೆ 'ಗ್ರಂಥ ಗ್ರಂಥಿ'ಯಾಗುತ್ತದೆ. ಆಗ ಸತ್ಯವು ನಮ್ಮ ಪಾಲಿಗೆ ದೂರವಾಗುತ್ತದೆ. ಆಗ ಕಾಳಿಯು ಕಪ್ಪಾಗುತ್ತಾಳೆ.

**ಶ್ರೀರಾಮಕೃಷ್ಣರು:** ''ಕಾಳಿ ನಿಜವಾಗಿ ಕಪ್ಪೇನು? ದೂರದಿಂದ ನೋಡಿದರೆ ಕಪ್ಪಾಗಿ ಕಾಣುತ್ತಾಳೆ, ಹತ್ತಿರದಿಂದ ನೋಡಿ


ದರೆ ಕಪ್ಪಲ್ಲ. ಆಕಾಶ ದೂರದಿಂದ ನೀಲವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡಿದರೆ ಅದಕ್ಕೆ ಯಾವ ವರ್ಣವೂ ಇಲ್ಲ. ಸಮುದ್ರದ ನೀರು ದೂರದಿಂದ ನೀಲಿಯಾಗಿ ಕಾಣುತ್ತದೆ. ಹತ್ತಿರ ಹೋಗಿ ಕೈಗೆ ತೆಗೆದುಕೊಂಡು ನೋಡು, ಅದಕ್ಕೆ ಯಾವ ವರ್ಣವೂ ಇಲ್ಲ.''

ವಿವಿಧ ಬಣ್ಣಗಳು ಮನಸ್ಸಿನ ಸೃಷ್ಟಿ, ಹಾಗೆಯೇ ಎಲ್ಲ ಗುಣಗಳೂ ಮನಸ್ಸಿನ ಸೃಷ್ಟಿಯೇ. ನಾವು ನೋಡುತ್ತಿರುವ ವೈವಿಧ್ಯಮಯ ಪ್ರಪಂಚವು ನಿರ್ಗುಣ-ನಿರಾಕಾರ ಸತ್ಯದ ಮೇಲೆ ಮನಸ್ಸು ಹೊದಿಸಿರುವ ಮುಸುಕು. ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ, ಮಾತು ಮನಸ್ಸಿಗೆ ದೂರವಾದ ಪರಬ್ರಹ್ಮವು ನಮ್ಮ ಪಾಲಿಗೆ ಕತ್ತಲೆಯಂತೆ. ಆದ್ದರಿಂದ ಕಾಳಿಯನ್ನು ಕಪ್ಪಾಗಿ ಚಿತ್ರಿಸಲಾಗಿದೆ.

### ಜಗನ್ನಾಟಕ

**ಶ್ರೀರಾಮಕೃಷ್ಣರು:** ''ಭಗವತಿಯು ಲೀಲಾಮಯಿ. ಈ ಜಗತ್ತು ಆಕೆಯ ಕ್ರೀಡೆ. ಆಕೆ ಇಚ್ಛಾಮಯಿ. ಲಕ್ಷ ಜನರಲ್ಲಿ ಎಲ್ಲೋ ಒಬ್ಬರಿಗೆ ಮಾತ್ರ ಮುಕ್ತಿ ಕೊಡುತ್ತಾಳೆ. ತಾನು ಸೃಷ್ಟಿಸಿದ ವಸ್ತುಗಳೊಡನೆ ತಾನು ಆಟವಾಡುತ್ತಲೇ ಇರಬೇಕು ಅಂತ ಆಕೆಯ ಇಚ್ಛೆ. ಕಣ್ಣುಮುಚ್ಚಾಲೆ ಆಟದಲ್ಲಿ ಯಾರು ಹೋಗಿ ಅಜ್ಜಿಯನ್ನು ಮುಟ್ಟಿಬಿಡುತ್ತಾರೊ, ಅವರು ಅನಂತರ ಓಡಾಡಬೇಕಾಗಿರುವುದಿಲ್ಲ. ಎಲ್ಲರೂ ಹೋಗಿ ಆಕೆಯನ್ನು ಮುಟ್ಟಿಬಿಟ್ಟರೆ ಆಟ ಹೇಗೆ ಮುಂದುವರಿಯಬೇಕು? ಅದು ಆಕೆಗೆ ಅಸಂತೋಷವನ್ನು ಉಂಟುಮಾಡುತ್ತದೆ. ಆಟ ಮುಂದುವರಿದರೇನೇ ಆಕೆಗೆ ಸಂತೋಷ.''

ಈ ಪ್ರಪಂಚವೆಂಬ ನಾಟಕದಲ್ಲಿ ನಾವೆಲ್ಲ ಪಾತ್ರಧಾರಿಗಳು. ನಾವು ಪಾತ್ರಧಾರಿಗಳು ಎಂಬುದನ್ನು ಮರೆತು ಆಯಾಯ ಪಾತ್ರದೊಡನೆ ತಾದಾತ್ಮ್ಯ ಹೊಂದಿದರೆ ತಪ್ಪು ನಮ್ಮದೇ. ನಮ್ಮ ಎಲ್ಲ ಸುಖ ದುಃಖಗಳಿಗೂ ಇದೇ ಕಾರಣ. ಜ್ಞಾನಿ ವೃದ್ಧರೊಬ್ಬರು ಮರಣಶಯ್ಯೆಯಲ್ಲಿ ಮಲಗಿದ್ದರು. ಸಾಯುವ ಮುನ್ನ ತಮ್ಮ ಸಂಬಂಧಿಕರು ಸ್ನೇಹಿತರು ಎಲ್ಲರನ್ನೂ ಹತ್ತಿರ ಕರೆದು ಹೇಳಿದರು: ''ನೋಡಿ, ಇದು ನನ್ನ ಜೀವನ ನಾಟಕದ ಕೊನೆಯ ದೃಶ್ಯ. ನೀವೆಲ್ಲರೂ ಇದನ್ನು ನೋಡಿ ಸಂತೋಷದಿಂದ ಚಪ್ಪಾಳೆ ತಟ್ಟಬೇಕು. ಆದರೆ 'once more' ಎಂದು ಹೇಳಬಾರದು.'' ಜೀವನದ ಘಟನೆಗಳನ್ನೆಲ್ಲ ಒಂದು ಆಟದ ಮನೋಭಾವದಿಂದ ಸ್ವೀಕರಿಸಬೇಕು (Sportive Spirit). ಒಂದು ಹಾಸ್ಯ ಪ್ರಸಂಗವನ್ನು ಕೇಳಿ: ಏಸುಕ್ರಿಸ್ತನು ಒಮ್ಮೆ ಒಂದು ಕಾಲ್ಚೆಂಡಾಟವನ್ನು (football match)ನೋಡಲು ಹೋದನು. ಅದು ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ್ ಪಂಗಡಗಳ ನಡುವಿನ ಆಟ. ಕ್ರಿಸ್ತನು ಎರಡೂ ಪಂಗಡದವರು ಗೋಲ್ ಮಾಡಿದಾಗಲೂ ಚಪ್ಪಾಳೆ ತಟ್ಟಿ ಆನಂದಿಸುತ್ತಿದ್ದನು. ಪ್ರೇಕ್ಷಕರಲ್ಲಿ ಒಬ್ಬನು ಕೇಳಿದನು,



''ನೀನು ಯಾವ ಪಂಗಡಕ್ಕೆ ಸೇರಿದವನು?'' ಎಂದು. ಜೀಸಸ್: ''ನಾನು ಯಾವ ಪಂಗಡಕ್ಕೂ ಸೇರಿಲ್ಲ. ನಾನು ಆಟವನ್ನು ನೋಡಿ ಆನಂದಿಸುತ್ತಿದ್ದೇನೆ ಅಷ್ಟೆ.'' ಪ್ರೇಕ್ಷಕನು ಇದನ್ನು ಕೇಳಿ, ''ಓ, ಇವನೊಬ್ಬ ನಾಸ್ತಿಕ'' ಎಂದು ಉದ್ಗರಿಸಿದ.

ಶ್ರೀರಾಮಕೃಷ್ಣರು ಈ ಸಂದರ್ಭದಲ್ಲಿ ರಾಮಪ್ರಸಾದನ ಹಾಡೊಂದನ್ನು ಹಾಡುತ್ತಾರೆ. ಅದರ ತಾತ್ಪರ್ಯ: ಜಗನ್ಮಾತೆಯು ಗಾಳಿಪಟವನ್ನು ಹಾರಿಸುತ್ತಿರುವವಳು. ಸಾವಿರಾರು ಪಟಗಳಲ್ಲಿ ಒಂದು ಎರಡು ಪಟ ಕೈತಪ್ಪಿಸಿಕೊಂಡು ಎಲ್ಲೋ ಮುಕ್ತವಾಗಿ ಹಾರಿಹೋಗುತ್ತವೆ. ಜಗನ್ಮಾತೆ ಅದನ್ನು ನೋಡಿ ಕೈಚಪ್ಪಾಳೆ ತಟ್ಟುತ್ತಾಳಂತೆ.

ಈ ಗಾಳಿಪಟದ ಉದಾಹರಣೆ ತುಂಬ ವೈಶಿಷ್ಟ್ಯಪೂರ್ಣವಾಗಿದೆ. ಗಾಳಿಪಟಗಳನ್ನು ಜೀವಿಗಳಿಗೆ ಹೋಲಿಸಬಹುದು. ಪಟವು ಹಗುರವಾಗಿರುವುದರಿಂದ ಅದು ಮೇಲಕ್ಕೆ ಹಾರುತ್ತದೆ. ಹಾಗೆಯೇ ಜೀವಿಗಳಲ್ಲಿ ಕರ್ಮದ ಹೊರೆ ಅಧಿಕವಾಗಿದ್ದರೆ ಅವು ಆಧ್ಯಾತ್ಮಿಕ ಜೀವನದಲ್ಲಿ ಮೇಲೇರಲಾರವು. ಪಟವು ಹಾರಲು ಗಾಳಿಯ ಆಶ್ರಯವಂತೂ ಬೇಕೇಬೇಕು. ಅದೇ ರೀತಿ ಭಗವದನುಗ್ರಹದ ಗಾಳಿಯಿಂದಲೇ ಜೀವಿಗಳು ಮೇಲೇರಲು ಸಾಧ್ಯ. ಆ ದಾರವೇ ಭಗವತಿಯ ಇಚ್ಛೆ. ಅವಳ ಇಚ್ಛೆಯಿಂದಲೇ ಎಲ್ಲವೂ ನಡೆಯುವುದು. *(ಮುಂದುವರಿಯುವುದು)*